**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕಃ</u> 12.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ ಪರ ವಕೀಲರು **ಶ್ರೀ. ಎಂ ಆರ್ ಆರ್** ರವರಿಂದ.

ಜಮೀನು ನಮ್ಮದಾಗಿರುವುದರಿಂದ ಈ ದಾವಾ ಹಾಕಿರುತ್ತೇನೆ. ದಾವಾ ಸ್ವತ್ತು ಕ್ರಯ ಪತ್ರದ ಮುಖಾಂತರ ಬಂದಿರುತ್ತದೆ. ದಾವಾ ಸ್ವತ್ತನ್ನು 1962 ರಲ್ಲಿ ಖರೀದಿಸಿರುತ್ತೇನೆ. ಆ ಸಮಯದಲ್ಲಿ ಆ ಕ್ರಯ ಪತ್ರದಲ್ಲಿ ಸರ್ವೆ ನಂ. 20/25 ರ ಒಂದೇ ಸ್ವತ್ತನ್ನು ಖರೀದಿಸಿರುತ್ತೇನೆ. ದಾವಾ ಸ್ವತ್ತನ್ನು ನನ್ನ ತಂದೆಗೆ ಖರೀದಿಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಿರುವ ವ್ಯಕ್ತಿ 08.06.1953 ರಲ್ಲಿ ಮೂಡ್ಲಿಗೌಡ ಆಃ ಚಾಮೇಗೌಡ ಎಂಬುವವರಿಗೆ ಕ್ರಯಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಖರೀದಿಸುವ ಪೂರ್ವದಲ್ಲಿಯೇ ಅದನ್ನು ಮಾರಾಟ ಮಾಡಿರುವುದರಿಂದ ನಮಗೆ ದಾವಾ ಸ್ವತ್ತನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮೂಡ್ಲಿಗೌಡ ಆಃ ಚಾಮೇಗೌಡ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ 1973-74 ನೇ ಸಾಲಿನಲ್ಲಿ ಅವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಮೂಡ್ಲಿಗೌಡ ಆಃ ಚಾಮೇಗೌಡ ಎಂಬುವವರು ದಾವಾ ಸ್ವತ್ತನ್ನು ಪ್ರತಿವಾದಿಗೆ ಗುತ್ತಿಗೆಗೆ ನೀಡಿದ್ದರಿಂದ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾದೀನದಲ್ಲಿದ್ದರಿಂದ ಮತ್ತು ಆ ಕಾಲಕ್ಕೆ ಉಳುವವನೇ ಭೂಮಿ ಒಡೆಯ ಕಾನೂನಿನ ಪ್ರಕಾರ ಮತ್ತು ಪ್ರತಿವಾದಿಯ ಕುಟುಂಬದವರು ಪ್ರತಿವಾದಿಗೆ ದಾವಾ ಸ್ವತ್ತನ್ನು ಹಿಸ್ಸೆ ಮೂಲಕ ನೀಡಿದ್ದು ಮತ್ತು ದಿಃ 02.06.1992 ರಂದು ಎಂ ಆರ್ 16/1989-90 ರೀತ್ಯಾ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತು ವರ್ಗಾವಣೆ ಆಗಿರುತ್ತದೆ. 1973-74 ನೇ ಇಸವಿಯಲ್ಲಿ ಮೂಡ್ಲಿಗೌಡ ಆಃ ಚಾಮೇಗೌಡ ರವರ ಹೆಸರಿಗೆ ಖಾತೆ ಇದ್ದಾಗಿನಿಂದಲೂ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ದಿಃ 19.11.1962 ರಂದು ಕ್ರಯಕ್ಕೆ ಪಡೆದ ಸಮಯದಲ್ಲಿ ನನ್ನ ತಂದೆ ಒಟ್ಟು 06 ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತುಗಳ ಪೈಕಿ ದಾವಾ

ಸ್ವತ್ತನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ಸಹಾ ನಮ್ಮ ಸ್ವಾದೀನದಲ್ಲಿರುತ್ತವೆ. ಸರ್ವೆ ನಂ. 20/8 ರಲ್ಲಿರುವ ಜಮೀನು ಈಗ ಪುಟ್ಟೇಗೌಡ ಅಥವಾ ಸಣ್ಣೇಗೌಡ ರವರ ಹೆಸರಿನಲ್ಲಿ ಬರುತ್ತಿದೆ. ಸಾಕ್ಷಿ ಮುಂದುವರೆದು ಅವರು ಷರೀಕ್ಕಾಗಿ ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 20/8 ರಲ್ಲಿರುವ ಜಮೀನು ಹಾಲಿ ಹೊನ್ನಮ್ಮ ಹಾಗೂ ಚನ್ನೇಗೌಡ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 20/5 ರಲ್ಲಿರುವ ಜಮೀನು ಹಾಲಿ ಹೊನ್ನಮ್ಮ ಹಾಗೂ ಚನ್ನೇಗೌಡ ರವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಾಗದ ಪಕ್ಕದಲ್ಲಿರುವ ಜಮೀನಿನ ಪಕ್ಕದಲ್ಲಿ ಹೊನ್ನಮ್ಮ ಹಾಗೂ ಚನ್ನೇಗೌಡ ಸ್ವಾದೀನದಲ್ಲಿದ್ದಾರೆಂದು ನುಡಿಯುತ್ತಾರೆ. ಸರ್ವೆ ನಂ. 20/5 ರ ಜಮೀನಿನ ಮೇಲೆ ಯಾವುದೇ ದಾವಾ ಹಾಕಿರುವುದಿಲ್ಲ. ದಾವಾ ಸ್ವತ್ತು ವಿಶೇಷ ಬೂ ಸ್ವಾದೀನಾದಿಕಾರಿ ಕಾರ್ಯಾಲಯ, ಹಾಸನ ದಿಂದ ಬರುವ ಪರಿಹಾರವನ್ನು ಪಡೆಯಬೇಕೆಂಬ ದುರುದ್ದೇಶದಿಂದ ಈ ಸುಳ್ಳು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮುಳುಗಡೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮುಳುಗಡೆ ಆಗಿದ್ದು ಬರುವ ಪರಿಹಾರ ಪ್ರತಿವಾದಿಗೆ ಸಿಗಬಾರದು ಎಂಬ ಉದ್ದೇಶದಿಂದ ನಾನು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಖಾತೆ ವರ್ಗಾವಣೆಗೆ ಗ್ರಾಮ ಲೆಕ್ಕಾದಿಕಾರಿಗೆ ಅರ್ಜಿ ನೀಡಿರುತ್ತೇನೆ. ಇನ್ನೂ ಖಾತೆ ವರ್ಗಾವಣೆ ಆಗಿರುವುದಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಕ್ರಯಕ್ಕೆ ಪಡೆಯುವ ಮುಂಚೆ ಮೂಡ್ಲಿಗೌಡ ಆಃ ಚಾಮೇಗೌಡ ರವರು ಖರೀದಿಸಿದ್ದರಿಂದ ಖಾತೆ ವರ್ಗಾವಣೆಗೆ ನಾನು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿ ನೀಡಿದ್ದರೆ ನಾನು ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ನಾನು ಅರ್ಜ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. 1989-90 ಇಸವಿಯಲ್ಲಿ ಪ್ರತಿವಾದಿಗೆ ಖಾತೆ ವರ್ಗಾವಣೆಗೆ ಆದೇಶವಾಗಿದ್ದು ಮತ್ತು ಅವರ ಕುಟುಂಬದಲ್ಲಿ ಆದ ಹಿಸ್ಸೆಯಲ್ಲಿ ದಾವಾ ಸ್ವತ್ತು ಪ್ರತಿವಾದಿಗೆ ಬಂದಿರುವುದರಿಂದ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಸ್ವತ್ತಿನ ಮೇಲೆ ಬ್ಯಾಂಕಿನಿದಿಂದ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಕಾನೂನು ರೀತ್ಯಾ ಸಾಲ ಪಡೆದಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸ್ವಾದೀನದಲ್ಲಿರುತ್ತಾರೆ ಎಂದು ಹಿಡುವಳಿ ಪತ್ರ ಸಹಾ ಬಂದಿರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಪಡೆದಿರುತ್ತಾರೆ

ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮುಳುಗಡೆ ಆಗಿದ್ದು ಬಂದಿರುವ ಪರಿಹಾರವನ್ನು ಪಡೆಯುವ ಉದ್ದೇಶದಿಂದ ನಾನು ಈ ಸುಳ್ಳು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವತ್ತು ಸ್ವಾದೀನದಲ್ಲಿ ಇರದಿದ್ದರೂ ಸಹಾ ಸ್ವ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನನಗೆ ವಕೀಲರು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನಾನು ಸುಳ್ಳು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**